●

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ 6ನೇ ಅಡ್ಡ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-3.

ಸಂಖ್ಯೆ:ಎ8/ಎಸ್‌ಎಸ್‌ಎಲ್‌ಸಿ/ಪೂ.ಸಿ.ಪ/30/2019-20 ದಿನಾಂಕ:30.11.2019

## :: ಸುತ್ತೋಲೆ ::

ವಿಷಯ: - ರಾಜ್ಯ ಮಟ್ಟದಲ್ಲಿ ಎಸ್‌ಎಸ್‌ಎಲ್‌ಸಿ ಪೂರ್ವಸಿದ್ಧತಾ ಪರೀಕ್ಷೆಯನ್ನು ನಡೆಸುವ ಕುರಿತು.

ಉಲ್ಲೇಖ:- 1. ಸರ್ಕಾರದ ಆದೇಶ ಸಂಖ್ಯೆ:ಇಡಿ 302 ಎಸ್‌ಎಲ್‌ಬಿ 2017 ದಿನಾಂಕ:15.09.2018.

2. ಸರ್ಕಾರದ ಆದೇಶ ಸಂಖ್ಯೆ:ಇಡಿ 302 ಎಸ್‌ಎಲ್‌ಬಿ 2017 ದಿನಾಂಕ:28.11.2019.

* * * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ-2ರ ಸರ್ಕಾರದ ಆದೇಶದಲ್ಲಿ ಉಲ್ಲೇಖಿತ-1ರ ಆದೇಶವನ್ನು ಹಿಂಪಡೆಯಲಾಗಿದೆ ಮತ್ತು 2019-20ನೇ ಸಾಲಿನಿಂದ ಎಸ್.ಎಸ್.ಎಲ್.ಸಿ ಪೂರ್ವಸಿದ್ಧತಾ ಪರೀಕ್ಷೆಗೆ ಪ್ರಶ್ನೆಪತ್ರಿಕೆಯನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದಲೇ ರಾಜ್ಯ ಮಟ್ಟದಲ್ಲಿ ಸಿದ್ಧಪಡಿಸಿ ಸರಬರಾಜು ಮಾಡಲು ಅನುಮತಿಸಿ ಆದೇಶಿಸಲಾಗಿರುತ್ತದೆ. ಹಾಗೂ ಮಂಡಳಿಯು ನಡೆಸುವ ಎಸ್.ಎಸ್.ಎಲ್.ಸಿ ಪೂರ್ವಸಿದ್ಧತಾ ಪರೀಕ್ಷೆಯನ್ನು ಹೊರತುಪಡಿಸಿ ತಾಲ್ಲೂಕು ಮತ್ತು ಜಿಲ್ಲಾ ಹಂತದಲ್ಲಿ ಯಾವುದೇ ಪೂರ್ವಸಿದ್ಧತಾ ಪರೀಕ್ಷೆಯನ್ನು ನಡೆಸತಕ್ಕದ್ದಲ್ಲ ಎಂದು ತಿಳಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ 2019-20ನೇ ಸಾಲಿನಿಂದ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದಲೇ ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆಗೆ ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸಿ ಸರಬರಾಜು ಮಾಡಲಾಗುತ್ತದೆ. ಈ ಸಂಬಂಧ ವಿವಿಧ ಹಂತದ ಪ್ರಕ್ರಿಯೆಗಳು/ಜವಾಬ್ದಾರಿಗಳು ಈ ಕೆಳಕಂಡಂತಿದೆ.

### ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯ ಕರ್ತವ್ಯ ಮತ್ತು ಜವಾಬ್ದಾರಿಗಳು

- ಎಸ್.ಎಸ್.ಎಲ್.ಸಿ ಪೂರ್ವಸಿದ್ಧತಾ ಪರೀಕ್ಷೆಗೆ ಹಾಜರಾಗಬಹುದಾದ ವಿದ್ಯಾರ್ಥಿಗಳ ಮಾಹಿತಿಯನ್ನು ಕ್ರೂಢೀಕರಿಸುವುದು.
- ಪೂರ್ವ ಸಿದ್ಧತಾ ಪರೀಕ್ಷೆಯನ್ನು ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ ವಿದ್ಯಾರ್ಥಿಗಳ ಸಂಖ್ಯೆಗನುಗುಣವಾಗಿ ವಿಷಯವಾರು ಪ್ರಶ್ನೆಪತ್ರಿಕೆಯನ್ನು ಸಿದ್ಧಪಡಿಸಿ ರವಾನಿಸುವುದು.
- ಪೂರ್ವ ಸಿದ್ಧತಾ ಪರೀಕ್ಷೆಗೆ ವೇಳಾಪಟ್ಟಿಯನ್ನು ಸಿದ್ಧಪಡಿಸುವುದು.
- ಮುದ್ರಣವಾದ ವಿಷಯವಾರು ಪ್ರಶ್ನೆ ಪತ್ರಿಕೆಗಳನ್ನು ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರ ಕಛೇರಿಗೆ ರವಾನಿಸುವುದು.

### ಉಪನಿರ್ದೇಶಕರು (ಆಡಳಿತ), ಕ್ಷೇತ್ರ ಶಿಕ್ಷಣಾಧಿಕಾರಿಗಳ ಮತ್ತು ಶಾಲಾ ಮುಖ್ಯೋಪಾಧ್ಯಾಯರ ಕರ್ತವ್ಯ ಮತ್ತು ಜವಾಬ್ದಾರಿಗಳು

- ಮಂಡಳಿಯಿಂದ ಸರಬರಾಜಾಗುವ ಪ್ರಶ್ನೆ ಪತ್ರಿಕೆಗಳನ್ನು ಉಪನಿರ್ದೇಶಕರು (ಆಡಳಿತ)ರವರು ಸ್ವೀಕರಿಸಿ, ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ವಿತರಿಸುವುದು.
- ಉಪನಿರ್ದೇಶಕರು (ಆಡಳಿತ)ರವರಿಂದ ಸ್ವೀಕರಿಸಿದ ಪ್ರಶ್ನೆ ಪತ್ರಿಕೆಗಳ ಭಾಂಗಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ತಾಲ್ಲೂಕು ಕೇಂದ್ರದ ಭದ್ರತಾ ಕೊಠಡಿಯಲ್ಲಿ ಶೇಖರಿಸಿ ನಂತರ ಎಲ್ಲಾ ವಿಷಯವಾರು ಪ್ರಶ್ನೆಪತ್ರಿಕೆಗಳನ್ನು ಪರೀಕ್ಷಾ ದಿನದ ಮುನ್ನವೇ ಎಲ್ಲಾ ಶಾಲೆಗಳಿಗೆ ವಿತರಿಸುವುದು.
- ಸಂಬಂಧಿಸಿದ ಶಾಲಾ ಮುಖ್ಯಸ್ಥರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಸ್ವೀಕರಿಸಿದ ಪ್ರಶ್ನೆಪತ್ರಿಕೆಗಳನ್ನು ತಮ್ಮ ಶಾಲೆಯ ಅಲ್ಮೇರಾದಲ್ಲಿ ಸುರಕ್ಷಿತವಾಗಿಟ್ಟು ಸೀಲ್ ಮಾಡುವುದು. ಪ್ರತಿ ಪರೀಕ್ಷಾ ದಿನದಂದು ವೇಳಾ ಪಟ್ಟಿಯಂತೆ ಅಂದಿನ ಪತ್ರಿಕೆಗಳನ್ನು ಮಾತ್ರ ತೆರೆದು ವಿದ್ಯಾರ್ಥಿಗಳಿಗೆ ವಿತರಿಸುವ ಪೂರ್ಣ ಜವಾಬ್ದಾರಿ ಶಾಲಾ ಮುಖ್ಯೋಪಾಧ್ಯಾಯರದ್ದಾಗಿರುತ್ತದೆ.
- ಪರೀಕ್ಷೆ ಮುಗಿದ ನಂತರ ಉತ್ತರ ಪತ್ರಿಕೆಗಳನ್ನು ಸಂಬಂಧಿಸಿದ ಶಾಲಾ ಹಂತದಲ್ಲಿಯೇ ಮೌಲ್ಯಮಾಪನ ಮಾಡುವುದು.
- ಮೌಲ್ಯಮಾಪನಗೊಂಡ ನಂತರ ಸಂಬಂಧಿಸಿದ ಶಾಲೆಯಲ್ಲಿ ಫಲಿತಾಂಶ ಪ್ರಕಟಿಸುವುದು.
- ಫಲಿತಾಂಶವನ್ನು ವಿಶ್ಲೇಷಣೆ ಮಾಡಿ, ಹಿಂದುಳಿದ ವಿದ್ಯಾರ್ಥಿಗಳಿಗೆ ವಿಶೇಷ ಕಾರ್ಯಯೋಜನೆ ಮೂಲಕ ವಾರ್ಷಿಕ ಪರೀಕ್ಷೆಗೆ ಸಿದ್ಧಗೊಳಿಸುವುದು ಸಂಬಂಧಿಸಿದ ಮುಖ್ಯೋಪಾಧ್ಯಾಯರ ಜವಾಬ್ದಾರಿಯಾಗಿರುತ್ತದೆ.
- ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ಧತಾ ಪರೀಕ್ಷೆಯ ವೇಳಾಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಅನುಬಂಧಿಸಿದೆ. ಇದರೊಂದಿಗೆ ಜೆ.ಟಿ.ಎಸ್ (71, 72, 73, 74), ಪರ್ಯಾಯ ವಿಷಯಗಳು (95, 96, 97, 98) ಹಾಗೂ ಎನ್.ಎಸ್.ಕ್ಯೂ.ಎಫ್ (86, 87, 88, 89, 90) ವಿಷಯಗಳ ಪೂರ್ವಸಿದ್ಧತಾ ಪರೀಕ್ಷೆಗೆ ಶಾಲಾ ಹಂತದಲ್ಲಿಯೇ ಸಂಬಂಧಿಸಿದ ಶಿಕ್ಷಕರಿಂದ ಪ್ರಶ್ನೆಪತ್ರಿಕೆ ತಯಾರಿಸಿಕೊಂಡು ಪರೀಕ್ಷೆಯನ್ನು ನಡೆಸಲು ಶಾಲಾ ಮುಖ್ಯ ಶಿಕ್ಷಕರು ಕ್ರಮ ತೆಗೆದುಕೊಳ್ಳುವುದು.

Scanned by CamScanner

ಎಸ್.ಎಸ್.ಎಲ್.ಸಿ ಪೂರ್ವ ಸಿದ್ದತಾ ಪರೀಕ್ಷೆಗೆ ಪ್ರಶ್ನೆ ಪತ್ರಿಕೆಗಳು ರಾಜ್ಯ ಘಟಕದಿಂದ ನೇರವಾಗಿ ಜಿಲ್ಲಾ ಉಪನಿರ್ದೇಶಕರು (ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆರವರಿಗೆ ಸರಬರಾಜಾಗುತ್ತಿದ್ದು, ಅಲ್ಲಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ ಸಂಬಂಧಪಟ್ಟ ಶಾಲೆಗಳಿಗೆ ಸರಬರಾಜಾಗುವುದು. ಆದ್ದರಿಂದ ಖಜಾನೆಗಳಲ್ಲಿ ಠೇವಣಿಸುವ ಅವಶ್ಯಕತೆ ಇರುವುದಿಲ್ಲ.

**ಪರೀಕ್ಷಾ ಶುಲ್ಕ :**

- ಈಗಾಗಲೇ ಮಂಡಳಿಯ ಜಾಲತಾಣದ ಮೂಲಕ ಶಾಲಾಲಾಗಿನ್‌ನಲ್ಲಿ ಎಸ್‌ಎಸ್‌ಎಲ್‌ಸಿ ಅಂತಿಮ ಪರೀಕ್ಷೆಗೆ ನೋಂದಾಯಿಸಿರುವ ವಿದ್ಯಾರ್ಥಿಗಳ ಅಂಕಿಅಂಶದಂತೆ, 2019-20ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ದತಾ ಪರೀಕ್ಷೆಗೆ ಶುಲ್ಕ ವಿನಾಯಿತಿ ಇರುವ ವಿದ್ಯಾರ್ಥಿಗಳನ್ನು ಹೊರತುಪಡಿಸಿ ಉಳಿದ ಸಾಮಾನ್ಯ ವಿದ್ಯಾರ್ಥಿಗಳಿಂದ ಪ್ರತಿ ವಿದ್ಯಾರ್ಥಿಗೆ ರೂ.25/-ಗಳ ಶುಲ್ಕವನ್ನು ಸಂಬಂಧಿಸಿದ ಶಾಲಾ ಮುಖ್ಯೋಪಾಧ್ಯಾಯರು ಪಡೆದು, ಮಂಡಳಿಯ ನೆಫ್ಟ್ ಚಲನ್ ಮೂಲಕ ಭೌತಿಕವಾಗಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಪಾವತಿಸುವುದು. (ಚಲನ್ ಪ್ರತಿ ಶಾಲಾಲಾಗಿನ್‌ನಲ್ಲಿ ಲಭ್ಯವಿದೆ)
- ಪೂರ್ವ ಸಿದ್ದತಾ ಪರೀಕ್ಷೆಗೆ ಪರೀಕ್ಷಾ ಶುಲ್ಕವನ್ನು ವಿದ್ಯಾರ್ಥಿಗಳಿಂದ ಪಡೆದು ಮಂಡಳಿಯ ನೆಫ್ಟ್ ಚಲನ್ ಮೂಲಕ ಬ್ಯಾಂಕಿಗೆ ಪಾವತಿಸಲು ಅಂತಿಮ ದಿನಾಂಕ:31.12.2019.
- ಪೂರ್ವ ಸಿದ್ದತಾ ಪರೀಕ್ಷೆಗೆ ಪರೀಕ್ಷಾ ಶುಲ್ಕವನ್ನು ನೆಫ್ಟ್ ಚಲನ್ ಮೂಲಕ ಬ್ಯಾಂಕಿಗೆ ಪಾವತಿಸಿದ ಮೂಲ ಚಲನ್‌ನನ್ನು ದಿನಾಂಕ:10.01.2020ರೊಳಗೆ ಭೌತಿಕವಾಗಿ ಮಂಡಳಿಗೆ ಕಡ್ಡಾಯವಾಗಿ ರವಾನಿಸುವುದು.

**ಪರೀಕ್ಷೆಯ ವೇಳಾಪಟ್ಟಿ :**

- 2019-20ನೇ ಸಾಲಿನ ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ದತಾ ಪರೀಕ್ಷೆಯ ವೇಳಾಪಟ್ಟಿಯನ್ನು ಈ ಸುತ್ತೋಲೆಯೊಂದಿಗೆ ಅನುಬಂಧಿಸಿ ಕಳುಹಿಸಿದೆ.
- ಮಂಡಳಿಯು ನಿಗಧಿಪಡಿಸಿರುವ ಪೂರ್ವಸಿದ್ದತಾ ಪರೀಕ್ಷೆಯ ವೇಳಾಪಟ್ಟಿಯಂತೆ ಪರೀಕ್ಷೆಯನ್ನು ನಡೆಸುವುದು.
- ಮಂಡಳಿಯಿಂದ ಪ್ರಶ್ನೆಪ್ರತಿಕೆಗಳನ್ನು ಮಾತ್ರ ಸರಬರಾಜು ಮಾಡಲಾಗುವುದು.

**ಮಾರ್ಗಾಧಿಕಾರಿಗಳ ಸಂಭಾವನೆ ಮತ್ತು ವಾಹನದ ಇಂಧನ ವೆಚ್ಚಗಳು**

- ಎಸ್‌ಎಸ್‌ಎಲ್‌ಸಿ ಪೂರ್ವ ಸಿದ್ದತಾ ಪರೀಕ್ಷೆಗೆ ಉಪನಿರ್ದೇಶಕರ ಕಛೇರಿಯಿಂದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗೆ ಪ್ರಶ್ನೆಪತ್ರಿಕೆಗಳನ್ನು ರವಾನಿಸಲು ವಾಹನದ ಇಂಧನ ವೆಚ್ಚ ರೂ.1400/-ರಂತೆ ನಿಗಧಿಪಡಿಸಲಾಗಿದೆ.
- ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ಶಾಲೆಗಳಿಗೆ ಪ್ರಶ್ನೆಪತ್ರಿಕೆ ರವಾನಿಸಲು ಮಾರ್ಗಾಧಿಕಾರಿಗಳ ಸಂಭಾವನೆ ಪ್ರತಿ ಮಾರ್ಗಾಧಿಕಾರಿಗೆ ರೂ.150/-ರಂತೆ ನಿಗಧಿಪಡಿಸಿದೆ. (ಪ್ರತಿ ರೂಟ್‌ಗೆ ಇಬ್ಬರು ಮಾರ್ಗಾಧಿಕಾರಿಗಳನ್ನು ನೇಮಿಸುವುದು)
- ಪ್ರಶ್ನೆ ಪತ್ರಿಕೆಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ಶಾಲೆಗಳಿಗೆ ರವಾನಿಸಲು ವಾಹನದ ಇಂಧನ ವೆಚ್ಚ ಪ್ರತಿ ರೂಟ್‌ಗೆ ರೂ.1400/-ರಂತೆ ನಿಗಧಿಪಡಿಸಿದೆ.
- ಶಾಲಾ ಸಂಖ್ಯೆ ಹಾಗೂ ರೂಟ್ ಸಂಖ್ಯೆ ಆಧರಿಸಿ ಪ್ರತ್ಯೇಕವಾಗಿ ಸಾದಿಲ್ವಾರು ಮೊತ್ತವನ್ನು ಮಂಡಳಿಯಿಂದ ವಿತರಿಸಲಾಗುವುದು.

(ಕರಡು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

(ವಿ. ಸುಮಂಗಲ) 30/11
ನಿರ್ದೇಶಕರು, ಪರೀಕ್ಷೆಗಳು.

**ಗೆ,**

1. ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು(ಆಡಳಿತ), ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಉಪ ನಿರ್ದೇಶಕರ ಕಚೇರಿಯಲ್ಲಿ ನಾಮಾಂಕಿತರಾದ ಎಸ್.ಎಸ್.ಎಲ್.ಸಿ. ಪರೀಕ್ಷಾ ನೋಡಲ್ ಅಧಿಕಾರಿಯವರ ಮುಂದಿನ ಸೂಕ್ತ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಮುಂದಿನ ಸೂಕ್ತ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಸರ್ಕಾರದಿಂದ ಮಾನ್ಯತೆ ಪಡೆದ ಅನುದಾನಿತ ಮತ್ತು ಅನುದಾನ ರಹಿತ ಪ್ರೌಢ ಶಾಲೆ/ಸಂಯುಕ್ತ ಪದವಿ ಪೂರ್ವ ಕಾಲೇಜು ಮುಖ್ಯಸ್ಥರುಗಳಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
4. ಮಂಡಳಿಯ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
5. ಕಛೇರಿ ಪ್ರತಿ.

**ಪ್ರತಿಯನ್ನು :-**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕಲಬುರಗಿ ಮತ್ತು ಧಾರವಾಡರವರಿಗೆ ಮಾಹಿತಿಗಾಗಿ.
2. ನಿರ್ದೇಶಕರು (ಪ್ರೌಢ ಶಿಕ್ಷಣ), ಆಯುಕ್ತರ ಕಛೇರಿ, ಸಾಶಿಇ, ಬೆಂಗಳೂರು ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ.

Scanned by CamScanner

ಕರ್ನಾಟಕ ಸರ್ಕಾರ

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003.

ಸಂಖ್ಯೆ: ಸಿ1/SSLC/ಫೆ.2020-ಪೂ.ಸಿ.ಪ.ವೇ/43/2019-20 ದಿನಾಂಕ: 30.11.2019

## ರಾಜ್ಯಮಟ್ಟದ ಫೆಬ್ರವರಿ-2020ರ ಎಸ್.ಎಸ್.ಎಲ್.ಸಿ. ಪೂರ್ವಸಿದ್ಧತಾ ಪರೀಕ್ಷೆಯ ವೇಳಾಪಟ್ಟಿ

### ಶಾಲಾ ಅಭ್ಯರ್ಥಿಗಳಿಗೆ

| ದಿನಾಂಕ ಮತ್ತು ವಾರ | ವಿಷಯ | ವಿಷಯ ಸಂಕೇತ | ಸಮಯ | | ಒಟ್ಟು ಅವಧಿ | ಗರಿಷ್ಠ ಅಂಕಗಳು |
|---|---|---|---|---|---|---|
| 1 | 2 | 3 | 4(ಎ) | 4(ಬಿ) | 5 | 6 |
| 17.02.2020 (ಸೋಮವಾರ) | ಪ್ರಥಮ ಭಾಷೆ<br>ಕನ್ನಡ<br>ತೆಲುಗು<br>ಹಿಂದಿ<br>ಮರಾಠಿ<br>ತಮಿಳು<br>ಉರ್ದು<br>ಇಂಗ್ಲೀಷ್<br>ಸಂಸ್ಕೃತ | 01<br>04<br>06<br>08<br>10<br>12<br>14<br>16 | ಬೆ.9.30 | ಮ.12.45 | 3.00 ಗಂಟೆ 15 ನಿಮಿಷ | 100<br>100<br>100<br>100<br>100<br>100<br>100<br>100 |
| 18.02.2020 (ಮಂಗಳವಾರ) | ಕೋರ್ ಸಬ್ಜೆಕ್ಟ್: ಗಣಿತ | 81 | ಬೆ.9.30 | ಮ.12.45 | 3.00 ಗಂಟೆ 15 ನಿಮಿಷ | 80<br>80 |
| 19.02.2020 (ಬುಧವಾರ) | ದ್ವಿತೀಯ ಭಾಷೆ: ಇಂಗ್ಲೀಷ್<br>ಕನ್ನಡ | 31<br>33 | ಬೆ.9.30 | ಮ.12.30 | 2.45 ಗಂಟೆ 15 ನಿಮಿಷ | 80<br>80 |
| 20.02.2020 (ಗುರುವಾರ) | ತೃತೀಯ ಭಾಷೆ ಹಿಂದಿ<br>ಕನ್ನಡ<br>ಇಂಗ್ಲೀಷ್<br>ಅರೇಬಿಕ್<br>ಪರ್ಷಿಯನ್<br>ಉರ್ದು<br>ಸಂಸ್ಕೃತ<br>ಕೊಂಕಣಿ<br>ತುಳು | 61<br>62<br>63<br>64<br>65<br>66<br>67<br>68<br>69 | ಬೆ.9.30 | ಮ.12.30 | 2.45 ಗಂಟೆ 15 ನಿಮಿಷ | 80<br>80<br>80<br>80<br>80<br>80<br>80<br>80<br>80 |
| 21.02.2020 : ಶುಕ್ರವಾರ : ಮಹಾಶಿವರಾತ್ರಿ ಹಬ್ಬದ ಪ್ರಯುಕ್ತ ರಜಾದಿನ | | | | | | |
| 22.02.2020 (ಶನಿವಾರ) | ಕೋರ್ ಸಬ್ಜೆಕ್ಟ್<br>ಸಮಾಜ ವಿಜ್ಞಾನ | 85 | ಬೆ.9.30 | ಮ.12.45 | 3.00 ಗಂಟೆ 15 ನಿಮಿಷ | 80 |
| 23.02.2020 : ಭಾನುವಾರ ರಜಾದಿನ | | | | | | |
| 24.02.2020 (ಸೋಮವಾರ) | ಕೋರ್ ಸಬ್ಜೆಕ್ಟ್<br>ವಿಜ್ಞಾನ | 83 | ಬೆ.9.30 | ಮ.12.45 | 3.00 ಗಂಟೆ 15 ನಿಮಿಷ | 80 |

**ಸೂಚನೆ:** ಜೆ.ಟಿ.ಎಸ್. (71, 72, 73, 74), ಪರ್ಯಾಯ ವಿಷಯಗಳು (95, 96, 97, 98) ಹಾಗೂ ಎನ್.ಎಸ್.ಕ್ಯೂ.ಎಫ್ (86, 87, 88, 89, 90) ವಿಷಯಗಳ ಪೂರ್ವಸಿದ್ಧತಾ ಪರೀಕ್ಷೆಗೆ ಶಾಲಾ ಹಂತದಲ್ಲಿಯೇ ಸಂಬಂಧಿಸಿದ ಶಿಕ್ಷಕರಿಂದ ಪ್ರಶ್ನೆಪತ್ರಿಕೆ ತಯಾರಿಸಿಕೊಂಡು ಪರೀಕ್ಷೆಯನ್ನು ನಡೆಸಲು ಶಾಲಾ ಮುಖ್ಯ ಶಿಕ್ಷಕರು ಕ್ರಮ ತೆಗೆದುಕೊಳ್ಳುವುದು.

ನಿರ್ದೇಶಕರು (ಪರೀಕ್ಷೆಗಳು)
ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ

D:\d (192.168.100.2)\2020-MARCH-SSLC-EXAM\Time-Table-Preparatory-Exam-2020.docx

Scanned by CamScanner

GOVERNMENT OF KARNATAKA

# KARNATAKA SECONDARY EDUCATION EXAMINATION BOARD

6th Cross, Malleswaram, Bengaluru – 560 003.

No: C1/SSLC/Feb-2020-Pu.Si.Pa.Ve /43/2019-20 Date: 30.11.2019

## NOTIFICATION

## STATE LEVEL FEBRUARY-2020 SSLC PREPARATORY EXAMINATION TIME TABLE

**For REGULAR FRESH STUDENTS**

| Date & Day | Subject | Sub Code | Time | | Total Duration | Max Marks |
|---|---|---|---|---|---|---|
| | | | From | To | | |
| 1 | 2 | 3 | 4(a) | 4(b) | 5 | 6 |
| **17.02.2020 Monday** | **First Language:**<br>Kannada<br>Telugu<br>Hindi<br>Marati<br>Tamil<br>Urdu<br>English<br>Sanskrit | 01<br>04<br>06<br>08<br>10<br>12<br>14<br>16 | 09.30AM | 12.45 PM | 3.00 Hours 15Mins | 100<br>100<br>100<br>100<br>100<br>100<br>100<br>100 |
| **18.02.2020 Tuesday** | **Core Subject:**<br>Mathematics | 81 | 09.30AM | 12.45 PM | 3.00 Hours 15 Mins | 80<br>80 |
| **19.02.2020 Wednesday** | **Second Language**<br>English<br>Kannada | 31<br>33 | 09.30AM | 12.30 PM | 2.45 Hours 15 Mins | 80<br>80 |
| **20.02.2020 Thursday** | **Third Language**<br>Hindi<br>Kannada<br>English<br>Arabic<br>Persian<br>Urdu<br>Sanskrit<br>Konkani<br>Tulu | 61<br>62<br>63<br>64<br>65<br>66<br>67<br>68<br>69 | 09.30AM | 12.30PM | 2.45 Hours 15 Mins | 80<br>80<br>80<br>80<br>80<br>80<br>80<br>80<br>80 |
| **21.02.2020 : Friday : Mahashivaratri Festival Holiday** | | | | | | |
| **22.02.2020 Saturday** | **Core Subject:**<br>Social Science | 85 | 09.30AM | 12.45PM | 3.00 Hours 15 Mins | 80 |
| **23.02.2020 : Sunday : Holiday** | | | | | | |
| **24.02.2020 Monday** | **Core Subject:**<br>Science | 83 | 09.30AM | 12.45 PM | 3.00 Hours 15 Mins | 80 |

**NOTE:** Head Masters should take necessary action to prepare question paper for JTS (71, 72, 73, 74), Alternative Subjects (95, 96, 97, 98) and NSQF (86, 87, 88, 89, 90) for preparatory examination.

**Director (Examinations)**
**Karnataka Secondary Education Examination Board**



Scanned by CamScanner